# ಬೆಳ್ಳಿತೆರೆಯಲ್ಲಿ ಬೇಂದ್ರೆಗಾರುಡಿ



ದೇವು ಪತ್ತಾರ

**ಬೇಂದ್ರೆಯವರ ಹಲವು ಆಸಕ್ತಿಗಳಲ್ಲಿ ಸಿನಿಮಾ ಕೂಡ ಒಂದು. ಬೇಂದ್ರೆಯವರ ಕವಿತೆಗಳನ್ನು ಸಿನಿಮಾಗಳಿಗೆ ಬಳಸಿಕೊಂಡಂತೆ, ಚಲನಚಿತ್ರಗಳಿಗೆಂದೇ ವರಕವಿ ಸಾಹಿತ್ಯ ರಚಿಸಿರುವುದುಂಟು.**

ವರಕವಿ ಬೇಂದ್ರೆಯವರ ಗೀತೆಗಳಲ್ಲಿ ಕೆಲವು, ಸಿನಿಮಾದಲ್ಲಿ ಹಾಡುಗಳಾಗಿ ಜನಪ್ರಿಯವಾಗಿದ್ದು ಎಲ್ಲರಿಗೂ ಗೊತ್ತಿರುವ ಸಂಗತಿ. ಬೇಂದ್ರೆಯವರು ಸಿನಿಮಾಗೆ ಸಂಭಾಷಣೆ ಬರೆದದ್ದು, ಸಿನಿಮಾಗಾಗಿಯೇ ಹಾಡುಗಳನ್ನು ಬರೆದ ಸಂಗತಿ ಬಹುತೇಕ ಅಜ್ಞಾತವಾಗಿಯೇ ಉಳಿದಿದೆ. ಬೇಂದ್ರೆ ಮತ್ತು ಸಿನಿಮಾದ ಒಡನಾಟ ಕುರಿತು ಕೆಲಮಾಹಿತಿ-ವಿವರ ಹಂಚಿಕೊಳ್ಳುವ ಪ್ರಯತ್ನವಿದು.

ಕವಿ ಬೇಂದ್ರೆಯವರ ಹೆಸರು ಸಿನಿಮಾದ ಜೊತೆಗೆ ತಳಕು ಹಾಕಿಕೊಂಡದ್ದು 1948ರಲ್ಲಿ. 'ಭಕ್ತ ರಾಮದಾಸ' ಸಿನಿಮಾದ ಮೂಲಕ ಬೇಂದ್ರೆಯವರ ಬೆಳ್ಳಿತೆರೆಯ ಒಡನಾಟ ಆರಂಭವಾಯಿತು.

ಗೀತ ರಚನೆಕಾರರಾಗಿ ಬೇಂದ್ರೆಯವರ ಹೆಸರು ಟೈಟಲ್ ಕಾರ್ಡ್‌ನಲ್ಲಿ ಮೊದಲ ಬಾರಿಗೆ ಕಾಣಿಸಿಕೊಂಡಿತು. ಆಗ ಬೇಂದ್ರೆಯರಿಗೆ 52 ವರ್ಷ ವಯಸ್ಸಾಗಿತ್ತು. ಅವರು ಸೊಲ್ಲಾಪುರದ ಡಿಎವಿ ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು.

ಶಂಕರಸಿಂಗ್ ಅವರು ನಿರ್ಮಾಪಕರಾಗಿದ್ದ ಮಹಾತ್ಮ ಪಿಕ್ಚರ್ಸ್‌ನಿಂದ ನಿರ್ಮಾಣವಾಗಿದ್ದ 'ಭಕ್ತ ರಾಮದಾಸ' ಚಿತ್ರದಲ್ಲಿ ಒಟ್ಟು 17 ಹಾಡುಗಳಿದ್ದವು. ಜಿ.ವಿಶ್ವನಾಥ ಅವರು ಸಂಗೀತ ನೀಡಿದ್ದ ಗೀತೆಗಳನ್ನು ನೀಲಮ್ಮ ಕಡಾಂಬಿ ಅವರು ಹಾಡಿದ್ದರು. ಸಾರ್ವಜನಿಕ ವೇದಿಕೆಯ ಕಛೇರಿಯಲ್ಲಿ ಹಾಡಿದ ಮೊದಲ ಮಹಿಳೆ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದ ನೀಲಮ್ಮ ಅವರು ವೀಣಾ ವಾದನದ ಜೊತೆಯಲ್ಲಿಯೇ